**ಪ್ರಧಾನ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ ಸಾಃ ಗೋಕಾಕ**

ಸಾಕ್ಷಿಗೆ ದಿನಾಂಕಃ **17-04-2023** ರಂದು ಪ್ರಮಾಣ ವಚನ ಬೋಧಿಸಲಾಯಿತು

C.C.No.556/2018
CW- 2 PW-2

ಸಾಕ್ಷಿದಾರರ ಹೆಸರು - ಮಹೇಶ ಶಂಕರ ಬೆಳಗಾಂವಕರ

ವಯಸ್ಸು - 40 ವರ್ಷ

ಉದ್ಯೋಗ - ವ್ಯಾಪಾರ

ಸಾಕೀನ - ಗೋಕಾಕ

ಮುಖ್ಯ ವಿಚಾರಣೆ**:** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಚಾಸಾ-1 ಮತ್ತು 3 ರವರ ಪರಿಚಯ ಇದೆ. ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿತರ ಪರಿಚಯ ಇಲ್ಲ. ನನಗೆ ಪೊಲೀಸರು ಯಾವುದೇ ಪಂಚನಾಮೆಕ್ಕೆ ಕರೆಸಿಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ. ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ. ಈ ಪ್ರಕರಣದ ಕುರಿತು ನನಗೆ ಯಾವುದೇ ಮಾಹಿತಿ ಇಲ್ಲ.

ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಗೆ ಸ್ಥಳ ಪಂಚನಾಮೆಯನ್ನು ತೋರಿಸಿದ್ದು ಸಾಕ್ಷಿಯು ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಹೀಗಾಗಿ ಸದರಿ ಸ್ಥಳ ಪಂಚನಾಮೆಯನ್ನು ನಿಪಿ-2 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2-ಎ ಎಂದು ಗುರುತಿಸಲಾಯಿತು. ನಾನು ನಿಪಿ-2 ಕ್ಕೆ ಪೊಲೀಸ ಠಾಣೆಗೆ ಹೋದಾಗ ಪೊಲೀಸರು ನನ್ನಿಂದ ಸಹಿ ಪಡೆದಿರುತ್ತಾರೆ. ಅದರಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ.

(ಈ ಸಂದರ್ಭದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರು ಕೋರಿದ್ದು ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ದಿಃ 28-04-2017 ರಂದು ನನ್ನನ್ನು ಹಾಗೂ ಚಾಸಾ-3 ರವರನ್ನು ಪೊಲೀಸರು ಪಂಚರಾಗಲು ಕೋರಿಕೊಂಡಿದ್ದರು ಎಂದರೆ ಸರಿಯಲ್ಲ. ನಾನು ಹಾಗೂ ಚಾಸಾ-3 ರವರು ಪಂಚರಾಗಲು ಒಪ್ಪಿಕೊಂಡ ಮೇರೆಗೆ ಚಾಸಾ-1 ರವರು ತೋರಿಸಿದ ಘಟನಾ ಸ್ಥಳದಲ್ಲಿ ಸಾಯಂಕಾಲ 05.45 ರಿಂದ 06.30 ಗಂಟೆಯವರೆಗೆ ಪಂಚನಾಮೆ ಮಾಡಿದ್ದರು ಎಂದರೆ ಸರಿಯಲ್ಲ. ನಿಪಿ-2 ರ ಪಂಚನಾಮೆ ಜರುಗಿಸುವಾಗ ಆರೋಪಿತರು ಚಾಸಾ-1 ರವರಿಗೆ ಹಲ್ಲೆ ಮಾಡಲು ಉಪಯೋಗಿಸಿದ ಕೊಡಲಿಯ ಕಟ್ಟಿಗೆಯ ಕಾವನ್ನು ಅಮಾನತ್ತುಪಡಿಸಿಕೊಂಡಿದ್ದರು ಎಂದರೆ ಸರಿಯಲ್ಲ. ನಾನು ಘಟನಾ ಸ್ಥಳದಲ್ಲಿ ನಿಪಿ-2 ಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಈಗ ಆರೋಪಿತರಿಗೆ ಸಹಾಯವಾಗಲಿ ಎನ್ನುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ ಇಲ್ಲ

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

(ರಾಜೀವ ಗೋಳಸಾರ)
ಪ್ರ.ದಿ.&ನ್ಯಾದಂ., ಗೋಕಾಕ.